ದಿಃ 03-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ. SGH ವಕೀಲರಿಂದ:

ನಾನು ದಾಖಲಿಸಿದ ದಾಖಲಾತಿಗಳು ಡಾ. ಸಂಗಮೇಶ ಟಕ್ಕಳಗಿ ರವರಿಗೆ ಸಂಬಂಧಿಸಿದವು ಇರುತ್ತವೆ. ನಾನು ದಾಖಲಿಸಿದ ದಾಖಲಾತಿಗಳು ಹಾಗೂ ಈ ಆರೋಪಿಗೂ ಸಂಬಂಧ ಇರುತ್ತದೆ. ನಾನು ಸಲ್ಲಿಸಿದ ದಾಖಲೆಗಳಲ್ಲಿ ಫಿರ್ಯಾದಿ ಇದ್ದು ಅದರಲ್ಲಿ ಆರೋಪಿಗೆ ಹೇಗೆ ಸಂಬಂದ ಇದೆ ಎಂದು ನಮೂದಿಸಿದ್ದೇನೆ. ನನ್ನ ವೈಯಕ್ತಿಕ ದೂರವಾಣಿ ಸಂಃ 9900508999 ಇಂದ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ. ಅವರಿಗೆ ನಾನು ಕರೆಮಾಡಿದಾಗ ಅವರು ಕರೆ ಸ್ವೀಕರಿಸಿರುವುದಿಲ್ಲ. ಸದರಿ ಸಂಗಮೇಶ ಟಕ್ಕಳಗಿ ರವರ ನಂಬರ ನನ್ನ ಮೊಬೈಲನಲ್ಲಿ ಇದ್ದು ನನಗೆ ಹೇಳಲು ಬರುವುದಿಲ್ಲ. ಡಾ. ಸಂಗಮೇಶ ಟಕ್ಕಳಗಿ ದಿಃ 05-08-2021 ರಂದು ಬೆಳಿಗ್ಗೆ 9 ಗಂಟೆಗಯಿಂದ 12-30 ರವರೆಗೆ ಆಸ್ಪತ್ರೆಯಲಿ ಕರ್ತವ್ಯದಲ್ಲಿದ್ದರು ಎಂದರೆ ಸರಿಯಲ್ಲ. ನಿಪಿ-20(ಎ) ರಲಿ ದಿಃ 05 ರಂದು ಡಾ. ಸಂಗಮೇಶ ಟಕ್ಕಳಗಿ ರವರ ಹಾಜರಾತಿಯನ್ನು A-Afternoon ಅಂತ ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 12 ರ ನಂತರ ಅವರು ಆಸ್ಪತ್ರೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಡಾ. ಸಂಗಮೇಶ ಟಕ್ಕಳಗಿ ರವರು ರಜೆ ಪತ್ರ ನೀಡಿರಲಿಲ್ಲ . ಅವರ ರಜೆ ಪತ್ರ ಕ್ಕೆ ನನ್ನ ಅನುಮೋದನೆ ಬೇಕಾಗುತ್ತದೆ.

ಸದರಿ ದಿನಾಂಕದಂದು ಡಾ. ಸಂಗಮೇಶ ಟಕ್ಕಳಗಿ ರವರು ಮದ್ಯಾಹ್ನ 12 ರ ನಂತರ ಗೈರು ಹಾಜರು ಇರುವುದರಿಂದ ಅವರ ಮೇಲೆ ದಾಳಿ ಮಾಡುವ ಪ್ರಸಂಗ ಇರಲಿಲ್ಲ.

ನಾನು ಆಳಂದದಲ್ಲಿ ಕರ್ತವ್ಯದಲ್ಲಿದ್ದಾಗ ಅಮಾನತುಗೊಂಡಿದ್ದೆ ಎಂದರೆ ಸರಿ. ಗೊಬ್ಬೂರು ಬಿ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯದಲ್ಲಿದ್ದಾಗ ನನ್ನ ಮೇಲೆ ಹಣದ ದುರುಪಯೋಗ ಕುರಿತು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ನಾನು ಕರ್ತವ್ಯ ನಿರ್ವಹಿಸಿದ ಎಲ್ಲಾ ಆಸ್ಪತ್ರೆಯಲ್ಲಿ ನನ್ನ ಮೇಲೆ ದೂರು ದಾಖಲಾಗಿತು ಎಂದರೆ ಸರಿಯಲ್ಲ. ದಿಃ 05-08-2021 ರಂದು ತಾಲೂಕ ವೈದ್ಯಾಧಿಕಾರಿಯಾಗಿ ರತ್ನಾಕರ ಎಂಬುವವರು ಇದ್ದರು ಎಂದರೆ ಸರಿ. ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಎಲ್ಲಾ ವೈದ್ಯರು ತಾಲೂಕ ವೈದ್ಯಾಧಿಕಾರಿ ಅಧೀನದಲ್ಲಿರುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮುಖ್ಯ ವೈದ್ಯಾಧಿಕಾರಿ ಅಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮುಖ್ಯ ವೈದ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ಪೋಲಿಸ ಅಧಿಕಾರಿಗಳಿಗೆ ನೀಡಿಲ್ಲ, ಆದರೆ ಹಾಜರಿ ಪುಸ್ತಕದಲ್ಲಿ ಮುಖ್ಯ ವೈದ್ಯಾಧಿಕಾರಿ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ದಿಃ 05-08-2021 ರಂದು ಮುಖ್ಯ ವೈದ್ಯಾಧಿಕಾರಿ ಎಂದು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಡಾ. ಸಂಗಮೇಶ ಟಕ್ಕಳಗಿ ರವರ ತಂದೆ ವೈದ್ಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೂರಿನಲ್ಲಿ ಅವರ ತಂದೆ ಆಸ್ಪತ್ರೆಯಲ್ಲಿ ಅವರು ಕೆಲಸ ಮಾಡುತ್ತಿದ್ದರು ಎಂದು ಬರೆದಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ 3 ರವರು ನಮ್ಮ ಅಸ್ಪತ್ರೆಯಲ್ಲಿ ಕಂಪ್ಯೂಟರ ಆಪರೇಟರ ಅಂತ ಕೆಲಸ ಮಾಡುತ್ತಿದ್ದರು. ಸದರಿಯವರಿಗೆ ದಾಳಿ ಮಾಡುವಾಗ ವಿಡಿಯೋ ಮಾಡು ಅಂತ ತಿಳಿಸಿರುತ್ತೇನೆ ಎಂದರೆ ಸರಿ. ಅದರಂತೆ ಅವರು ಮಾಡಿರುತ್ತಾರೆ ಎಂದರೆ ಸರಿ. ಆರೋಪಿಯೂ ವಿಡಿಯೋ ಮಾಡಲು ಮತ್ತು ದಾಳಿ ಮಾಡಲು ಅಡೆತಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ ಶಾಪ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಸ್ಪತ್ರೆಯ ಹೊರಭಾಗದಲ್ಲಿ 7-8 ಜನ ಮತ್ತು ಆಸ್ಪತ್ರೆಗೆ ಒಳಗಡೆ ರೋಗಿ ಇದ್ದರು. ಈ ಘಟನೆ ಆದುದ್ದನ್ನು ಅವರು ನೋಡಿರುತ್ತಾರೆ ಎಂದರೆ ಸಾಕ್ಷಿ ನೋಡಿರಬಹುದು ಎಂದು ನುಡಿಯುತ್ತಾರೆ. ಅವರುಗಳ ಹೆಸರು ನಾನು ವಿಚಾರಣೆ ಮಾಡಿಲ್ಲ.

ಆರೋಪಿ ವಿರುದ್ಧ ಮತ್ತು ಡಾ. ಸಂಗಮೇಶ ರವರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ